**<u>ದಿನಾಂಕ:30-06-2022 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>:ಮುಂದುವರೆದ ಪಾಟೀ ಸವಾಲುಃ 3 ಮತ್ತು 5 ನೇ ಪ್ರತಿವಾದಿಯರ ಪರ ಶ್ರೀ.ಕೆ.ಜಿ.ಎಸ್ ವಕೀಲರಿಂದ :</u>**

ನಾನು 2013 ನೇ ಇಸ್ವಿಯಲ್ಲಿ ನನ್ನ ಸಹೋದರ ಮತ್ತು ನಾನು ಮತ್ತೊಂದು ದಾವೆಯನ್ನು ಸಲ್ಲಿಸಿದ್ದೆವು ಎನ್ನುವುದು ಸರಿ. ಆ ದಾವೆಯನ್ನು ನಮ್ಮ ತಂದೆಯ ಆಸ್ತಿಗಳಲ್ಲಿ ಹಿಸ್ಸೆ ಕೋರಿ ಸಲ್ಲಿಸಿದ್ದೆವು. ಆ ದಾವೆಯಲ್ಲಿ ಪ್ರತಿವಾದಿಯರ ನಡುವೆ 1993 ರಂದು ವಾಟ್ನಿಯಾಗಿದೆ ಎಂಬುದಾಗಿ ಲಿಖಿತ ಹೇಳಿಕೆಯಲ್ಲಿ ಹೇಳಿದ ಕಾರಣ ಆ ದಾವೆಯನ್ನು ನಾವು ಮುಂದುವರೆಸಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಯವರು ತನ್ನ ಜೀವಿತದ ಕೊನೆಯ ದಿನಗಳಲ್ಲಿ ಅವರ ಮಗ ಪ್ರಭುಲಿಂಗಪ್ಪ ಎಂಬುವವರ ಜೊತೆ ಬೆಳಗಾಲಪೇಟೆಯಲ್ಲಿ ವಾಸವಾಗಿದ್ದರು. ಪ್ರಭುಲಿಂಗಪ್ಪನವರು ಬೆಳಗಾಲಪೇಟೆ ಗ್ರಾಮದ ಆಸ್ತಿಗಳನ್ನು ಎಲ್ಲರ ಜೊತೆಯಲ್ಲಿಯೇ ವಹಿವಾಟು ಮಾಡುತ್ತಿದ್ದರು. ಆ ಸಂದರ್ಭದಲ್ಲಿ ದಾವಾ ಆಸ್ತಿಗಳ ದಾಖಲೆಗಳನ್ನು ನಾನು ನಮ್ಮ ತಂದೆಯವರು ನೋಡಿಕೊಳ್ಳುತ್ತಿದ್ದ ಕಾರಣ ನಾನು ನೋಡಿರುವುದಿಲ್ಲ. ನಮ್ಮ ಕುಟುಂಬದಲ್ಲಿ 1993 ರಲ್ಲಿಯೇ ವಾಟ್ನಿಯಾಗಿ ನಮ್ಮ ಕುಟುಬಂದ ಎಲ್ಲಾ ಸದಸ್ಯರ ಹೆಸರುಗಳಿಗೆ ದಾಖಲಾಗಿದ್ದವು ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲೆಗೆ ಸಹಿ ಮಾಡಬೇಕಾದರೆ ನನ್ನ ಹೆಸರನ್ನು ಎಂ. ಶೋಭಾ ಎಂಬುದಾಗಿ ಸಹಿ ಮಾಡುತ್ತೇನೆ. 1993 ರಂದು ಆದ ವಾಟ್ನಿಯಲ್ಲಿ ನಾನು ಸಹ ಸೇರಿಕೊಂಡು ಆ ವಾಟ್ನಿ ಪತ್ರಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ 175/2 ವಿಸ್ತೀರ್ಣ 4 ಎಕರೆ 3 ಗುಂಟೆ ಜಮೀನನ್ನು ನನ್ನ ತಂದೆಯವರು ವಾಟ್ನಿಯಲ್ಲಿ ತಮ್ಮ ಹಿಸ್ಸೆಗೆ ಉಳಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಆಸ್ತಿ ಅವರು ಮೃತಪಟ್ಟ ನಂತರ ನನಗೆ ಬರಬೇಕೆಂದು ಮಾತುಕತೆಯಾಗಿತ್ತು ಅನ್ನುವುದು ಸರಿಯಲ್ಲ. ಆ ವಾಟ್ನಿಯಂತೆ ಡ ನಂಬರ 2285 ರಂತೆ ದೃಢಿಕರಣಗೊಂಡಿತ್ತು ಎಂದರೆ ಸರಿಯಲ್ಲ. ಆ ಆಸ್ತಿಯನ್ನು ನಾನು ಮತ್ತು ನನ್ನ ತಂದೆ ಕೂಡಿಯೇ ಮಾರಾಟ ಮಾಡಿದೆವು ಎಂದರೆ ಸರಿಯಲ್ಲ. ಈ ಹಿಂದೆ ನಮ್ಮ ಕುಟುಂಬದಲ್ಲಿ ವಾಟ್ನಿ ಮಾಡಿಕೊಂಡು ಅವರವರ ಹಿಸ್ಸೆಯಂತೆ ಕಬ್ಜಾ ವಹಿವಾಟು ಮಾಡುತ್ತಿದ್ದರೂ ಸಹ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ಕುಟುಂಬದ ವಾಟ್ನಿಯಂತೆ ಕೆಲವು ಸದಸ್ಯರು ತಮ್ಮ ಹಿಸ್ಸೆಗೆ ಬಂದ ಕೆಲವು ಆಸ್ತಿಗಳನ್ನು ಮಾರಾಟ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಖೊಟ್ಟಿ ಖಾತೆ

ಮಾಡಿಕೊಂಡು ಮಾರಾಟ ಮಾಡಿಕೊಂಡಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಅದೇ ರೀತಿ ನಾನು ಮತ್ತು ನನ್ನ ತಂದೆ ನಮ್ಮ ಹಿಸ್ಸೆಗೆ ಬಂದ ಆಸ್ತಿಯನ್ನು ಮಾರಾಟ ಮಾಡಿ ಈ ಖೊಟ್ಟಿ ಪ್ರಕರಣವನ್ನು ಸಲ್ಲಿಸಿದ್ದೇವೆ ಎಂದರೆ ಸಾಕ್ಷಿಯು ಮಾರಾಟ ಮಾಡಿರುವ ವಿಚಾರವೇ ನನಗೆ ಗೊತ್ತಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಈ ರೀತಿ ನಾನು ಮತ್ತು ನನ್ನ ತಂದೆಯವರು ಸೇರಿ ಮಾರಾಟ ಮಾಡಿದ ಆಸ್ತಿಯ ದಾಖಲೆಗೆ ನಾನು ಸಹ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಖೊಟ್ಟಿ ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

: **ಮರುವಿಚಾರಣೆ** : **ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ